ಸಿ.ಸಿ.1410/2024 ಪಿಡಬ್ಲ್ಯೂ-1

ದಿನಾಂಕಃ 05.03.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಎಸ್.ಆರ್. ವಕೀಲರಿಂದಃ

ಆರೋಪಿಯ ತಂದೆಗೆ 5-6 ಜನ ಮಕ್ಕಳು ಇರಬಹುದು. ನಾನು ಬಣಕಲ್ ಹೊರಟ್ಟಿಯ ವಾಸಿ ಎಂದರೆ ಸರಿ. ಆರೋಪಿ ಕೂಡಹಳ್ಳಿ ಗ್ರಾಮದ ವಾಸಿ. ನಾನು ವ್ಯವಸಾಯ ಮಾಡುತ್ತೇನೆ. ನನಗೆ ಬಣಕಲ್ ಹೊರಟ್ಟಿಯಲ್ಲಿ ಜಮೀನು ಇದೆ. ನಿಪಿ-1 ರಲ್ಲಿನ ಚೆಕ್ಕಿನಲ್ಲಿನ ಬರವಣಿಗೆಯನ್ನು ನನ್ನ ವಕೀಲರು ಕೊಟ್ಟ ಮಾಹಿತಿಯಂತೆ ಬರೆಯಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಾನೇ ಬರೆದು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಬಣಕಲ್ ನಲ್ಲಿ ದಿನಸಿ ಅಂಗಡಿ ನಡೆಸುತ್ತಿದ್ದಾರೆ. ಆರೋಪಿಗೆ ಸೇರಿದ ಅಂಗಡಿಯ ಹೆಸರು ಜೆನಿತ್ ಸ್ಟೋರ್ಸ್. ಆ ಅಂಗಡಿ ಮತ್ತಿಕಟ್ಟೆ ಸರ್ಕಲ್ ಬಳಿ ಇದೆ. 4-5 ವರ್ಷಗಳಿಂದ ಆರೋಪಿ ಅಂಗಡಿ ನಡೆಸುತ್ತಿದ್ದಾರೆ. ವ್ಯಾಪಾರದ ಸಲುವಾಗಿ ಆರೋಪಿ ನನ್ನ ಬಳಿ ಸಾಲ ಕೇಳಿದ್ದರು. ಈ ರೀತಿ 2022 ರ ಫೆಬ್ರವರಿಯಲ್ಲಿ ಹಣ ಕೇಳಿದ್ದು ದಿನಾಂಕ ನೆನಪಿಲ್ಲ. ಆರೋಪಿ ತನ್ನ ಅಂಗಡಿಯಲ್ಲೆ ನನ್ನ ಬಳಿ ಹಣ ಕೇಳಿದ್ದರು. ಆ ಸಮಯಕ್ಕೆ ಆರೋಪಿ ಒಬ್ಬರೆ ಇದ್ದರು. ನನ್ನೊಂದಿಗೂ ಸಹಾ ಬೇರೆ ಯಾರೂ ಇರಲಿಲ್ಲ.

ರೂ.5,50,000/- ಹಣ ಬೇಕು ಎಂದು ಆರೋಪಿ ನನ್ನ ಬಳಿ ಕೇಳಿದ್ದರು. ಈ ಹಿಂದೆ ಆರೋಪಿಗೆ 2-3 ಬಾರಿ ಹಣ ಕೊಟ್ಟಿದ್ದೆ. ಯಾವ ಯಾವ ವರ್ಷ ಹಣ ಕೊಟ್ಟಿದ್ದೆ ಎಂದು ನನಗೆ ನೆನಪಿಲ್ಲ. ರೂ.50,000/- ರಿಂದ ರೂ.2,00,000/- ದವರೆಗೂ ಹಣ ಕೊಟ್ಟಿದ್ದೆ. ಯಾವ ಯಾವ ಸಮಯಕ್ಕೆ ಎಷ್ಟು ಎಷ್ಟು ಹಣ ಕೊಟ್ಟಿದ್ದೆ ಎಂದು ಈಗ ಹೇಳಲು ಆಗುವುದಿಲ್ಲ. ಆ ಹಣವನ್ನು ಆರೋಪಿಯು ವಾಪಸ್ಸು ಕೊಟ್ಟಿದ್ದಾರೆ. ಆರೋಪಿಯ ಅಂಗಡಿಯಲ್ಲಿ ನಾನು ಖರೀದಿ ಮಾಡುತ್ತೇನೆ ಎಂದರೆ ಸರಿ. ಅಂಗಡಿ ಶುರುವಾಗಿದ್ದಗಿನಿಂದಲೂ ಅಲ್ಲಿ ಖರೀದಿಸುತ್ತಿದ್ದೇನೆ. ನಾನು ಆರೋಪಿಯ ಅಂಗಡಿಯಿಂದ ಸಾಲವಾಗಿ ದಿನಸಿ ಖರೀದಿಸುತ್ತಿರಲಿಲ್ಲ. ಆರೋಪಿ ನನ್ನ ಬಳಿ ಹಣ ಕೇಳಿದ್ದ ದಿನದಂದೆ ನಾನು ಅವರಿಗೆ ಹಣ ಕೊಟ್ಟಿದ್ದೆನೆ. ಕಾಫಿ, ಮೆಣಸು ಮತ್ತು ಅಡಿಕೆ ಮಾರಾಟ ದಿಂದ ಬಂದ ಹಣ ನನ್ನ ಬಳಿ ಇತ್ತು. 2022 ರಲ್ಲಿ ನಾನು 10-12 ಕ್ವಿಂಟಲ್ ಅಡಿಕೆ, 250 ಬ್ಯಾಗ್ ಕಾಫೀ ಸುಮಾರು 2 ½ ಟನ್ ಮೆಣಸು ಬೆಳೆ ಬೆಳೆದಿದ್ದೆ. ಬೆಳೆಯನ್ನು ಮನೆಯ ಬಳಿ ಬಂದು ಖರೀದಿಸುತ್ತಿದ್ದರು.

2022 ನೇ ಇಸವಿಯಲ್ಲಿ ನಾನು ಯಾರಿಗೆ ಬೆಳೆಯನ್ನು ಮಾರಾಟ ಮಾಡಿದ್ದೇನೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನನ್ನ ವಾರ್ಷಿಕ ವ್ಯವಹಾರದ ಬಗ್ಗೆ ಲೆಕ್ಕ ಇಡುವುದಿಲ್ಲ. ಬೆಳೆ ಮಾರಾಟ ಮಾಡಿದ ಬಗ್ಗೆ ರಶೀದಿಯನ್ನು ಪಡೆದಿಲ್ಲ. ನಾನು ಹೇಳಿದಂತೆ 2022 ರಲ್ಲಿ ಯಾವುದೇ ಬೆಳೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ಬೆಳೆ ಮಾರಾಟದಿಂದ ಬಂದ ಹಣದ ಪೈಕಿ ಆರೋಪಿಗೆ ಹಣ ಕೊಟ್ಟಿದ್ದೇನೆ ಎಂದು ದೂರಿನಲ್ಲಿ ಬರೆಸಿಲ್ಲ. ಬೆಳೆ ಮಾರಾಟದಿಂದ ಬಂದ ಹಣವನ್ನು ಆರೋಪಿಗೆ ಕೊಟ್ಟಿಲ್ಲದ ಕಾರಣ ಈ ರೀತಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಗದಾಗೇ ಹಣ

ಕೊಟ್ಟಿದ್ದೇನೆ. ಅಷ್ಟು ಹಣವನ್ನು ನಗದು ರೂಪದಲ್ಲಿ ಕೊಡಬಾರದು ಎಂದು ನನಗೆ ಗೊತ್ತಿರಲಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾಯಿದಂ.,
ಮೂಡಿಗೆರೆ.